

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ‘ಇ.ಸಿ.ಇ.’ ವಿಭಾಗದ 1960–63ರ ಬ್ಯಾಚಿನ ಎಂಜಿನಿಯರಿಂಗ್ ವಿದ್ಯಾರ್ಥಿಗಳು.**

ವ್ಯವಹಾರ ಕುದುರಿಸಿ, ಆ ಡೀಲ್ ಪಡೆದರು. ಇದರಿಂದಾಗಿ ದೇಶದ ಒಳಕ್ಕೆ ಕಂಪ್ಯೂಟರಿನ ಇತ್ತೀಚಿನ ಉತ್ಪನ್ನಗಳು, ಸಲಕರಣೆಗಳು ಆಗಮಿಸಲು ಸಹಾಯಕವಾಯಿತು. ಅದಾಗಲೇ ವಿಪ್ರೋ, ಎಚ್.ಸಿ.ಎಲ್. ಮತ್ತಿತರ ದೊಡ್ಡ ಕಂಪನಿಗಳು, ಕಂಪ್ಯೂಟರುಗಳನ್ನು ತಯಾರಿಸಲು ಆರಂಭಿಸಿದ್ದವು; ಅವರು ಇಂಟೆಲ್ 8086, 286, 386 ಪ್ರಾಸಸರ್‌ಗಳನ್ನು ಬಳಸುತ್ತಿದ್ದರು.

## ಮರಳಿ ಬೆಂಗಳೂರಿಗೆ

ಬೆಳವಣಿಗೆಯ ಮುಂದಿನ ಹೆಜ್ಜೆಯಾಗಿ, ಕಂಪನಿಯನ್ನು ವಿಸ್ತರಿಸಿ, ಬೆಂಗಳೂರಿನಲ್ಲಿ ತಯಾರಿಕಾ ವಿಭಾಗ (ಮ್ಯಾನುಫ್ಯಾಕ್ಚರ್ ಯೂನಿಟ್) ಮತ್ತು ಸಂಶೋಧನೆ ಮತ್ತು ವಿಕಾಸದ ವಿಭಾಗವನ್ನು (ಆರ್ ಅಂಡ್ ಡಿ ಯೂನಿಟ್) ಆರಂಭಿಸಲು ಯೋಚಿಸಿದರು. 1982ರಲ್ಲಿ ಭರತ್ 10ನೇ ತರಗತಿ ಮುಗಿಸಿದೊಡನೆ, ಇಡೀ ಕುಟುಂಬ ಬೆಂಗಳೂರಿಗೆ ಬಂದಿಳಿಯಿತು. ಬಸವನಗುಡಿಯ ಡಿ.ವಿ.ಜಿ. ರಸ್ತೆಯಲ್ಲಿ ಪ್ರಧಾನ ಕಚೇರಿ ಆರಂಭಿಸಿದರು. ಶಾಂತಾ–ವಿಜಯರಾಘವನ್ ಕೆಲಸದಲ್ಲಿ ಬಹುವಾಗಿ ವ್ಯಸ್ತರಾದರು. ಅಲ್ಲಿ ಮೂರು ಮಹಡಿಯ ಕಟ್ಟಡವನ್ನು ತೆಗೆದುಕೊಂಡಿದ್ದರು; ಮ್ಯಾನುಫ್ಯಾಕ್ಚರಿಂಗ್ ಮತ್ತು ಆರ್ ಅಂಡ್ ಡಿ ವಿಭಾಗಗಳಿಂದ ಉತ್ಪನ್ನಗಳು ಹೊರಬಂದವು, ಗ್ರಾಹಕರ ಸಮೂಹ ಹೆಚ್ಚಿತ್ತು.

ಸುರತ್ಕಲ್‌ನ ಕೆ.ಆರ್.ಇ.ಸಿ.ಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಭರತ್ 1988ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅಮೆರಿಕಗೆ ಹೋಗಬಯಸಿದರು. ಜುಲೈ 1988ರಲ್ಲಿ ಶಾಂತಾ, ಮಗನನ್ನು ಕರೆದುಕೊಂಡು ಸಿಂಗಪುರ, ಟೋಕಿಯೊ ಮೂಲಕ ಅಮೆರಿಕಗೆ ಬಂದರು. ಎರಡು ತಿಂಗಳು ಅಮೆರಿಕದಲ್ಲಿದ್ದು ಮಗನನ್ನು ಅಲ್ಲಿ ನೆಲೆನಿಲ್ಲಿಸಿ, ಕಂಪನಿಯ ಕೆಲಸವನ್ನೂ ಮಾಡಿದರು. ‘ಕೇಪ್ರಿಕಾರ್ನ್’, ‘ಸ್ಪೆಕ್ಟ್ರಮ್’ ಮೊದಲಾದ ತಯಾರಕರೊಡನೆ, ಮಾರಾಟಗಾರರೊಡನೆ ಮೀಟಿಂಗ್ ಮಾಡಿ, ‘ಸೀಗೇಟ್’ನಂತಹ ಕೆಲವು ಕಂಪ್ಯೂಟರ್ ಬಾಹ್ಯ ಸಲಕರಣೆಯ ಕಂಪನಿಗಳಿಗೂ ಭೇಟಿ ಇತ್ತರು. ತಮ್ಮೊಡನೆ ತಂದಿದ್ದ ಕೆಲವು ಬೋರ್ಡ್ಸ್‌ಗಳನ್ನು ರಿಪೇರಿ ಮಾಡಿಸಿಕೊಂಡು ಹಿಂತಿರುಗಿ ಹೊತ್ತು ತಂದರು. ಶಾಂತಾ ಮನೆಯ ಒಳ–ಹೊರಗೆ ಬಹುಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಅವರೊಳಗೆ ತಾಯಿಯಂತೆಯೇ, ಕಂಪನಿಯ ಮುಖ್ಯಸ್ಥೆಯೂ ಸದಾ ಜಾಗ್ರತವಾಗಿದ್ದಳು.

1990ರಲ್ಲಿ ಬೆಂಗಳೂರಿನ ‘ಎಲೆಕ್ಟ್ರಾನಿಕ್ ಸಿಟಿ’ಯಲ್ಲಿ ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೊಂದು ದೊಡ್ಡ ಕಟ್ಟಡ ಕಟ್ಟಿದರು. ಅಲ್ಲಿ ‘ಮೈಕ್ರಾನಿಕ್ ಡಿವೈಸಸ್ ಲಿಮಿಟೆಡ್’ ಕಾರ್ಖಾನೆ ಎದ್ದು ನಿಂತಿತು. 1992ರಲ್ಲಿ ‘ಸೆಲ್ಫ್ ಮೇಡ್’ ಉದ್ಯಮಿಯೆಂದು ‘ಇನ್‌ಸ್ಟಿಟ್ಯೂಟ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್’ ನೀಡುವ ‘ಉದ್ಯೋಗ ಪತ್ರ’ ಪ್ರಶಸ್ತಿ ವಿಜಯರಾಘವನ್ ಅವರಿಗೆ ಲಭಿಸಿತು. ಉದ್ಯಮದ ಬಹಳಷ್ಟು ಜವಾಬ್ದಾರಿ ಹೊತ್ತ ಸಹೋದ್ಯೋಗಿಯಾಗಿ ಮಾತ್ರವಲ್ಲ, ಜೀವನ ಸಂಗಾತಿಯಾಗಿ ಶಾಂತಾ ಅವರ ಕೊಡುಗೆಯನ್ನು ವಿಜಯರಾಘವನ್ ಬಹುವಾಗಿ ಗೌರವಿಸಿದವರು, ಗುರುತಿಸಿದವರು.

1992ರ ಡಿಸೆಂಬರ್ ತಿಂಗಳಿನಲ್ಲಿ ಕಂಪನಿ, ‘ಪಬ್ಲಿಕ್ ಲಿಮಿಟೆಡ್’ ಕಂಪನಿಯಾಯಿತು. ‘ಅಡ್ವಾನ್ಸ್ಡ್ ಮೈಕ್ರೋನಿಕ್ ಡಿವೈಸಸ್ ಲಿಮಿಟೆಡ್’ (ಎ.ಎಮ್.ಡಿ.ಎಲ್.) ಸ್ಥಾಪನೆಯಾಗಿತ್ತು. ಈಗ ಕಂಪನಿಯನ್ನು ವಿಸ್ತರಿಸಲು ಹಣ ಎತ್ತಲು ಸಾಧ್ಯವಾಯಿತು. ಶಾಂತಾ ಅದರ ಓರ್ವ ಡೈರೆಕ್ಟರ್ ಆದರು. ವಿಜಯರಾಘವನ್ ಅದರ ಎಂ.ಡಿ ಆದರು. ನನಗೆ ತಿಳಿದ ಮಟ್ಟಿಗೆ, ಶಾಂತಾ–ವಿಜಯರಾಘವನ್ ಕಂಪನಿಯೊಂದನ್ನು ಸ್ಥಾಪಿಸಿ ಜೊತೆಯಾಗಿ ದುಡಿದ ಕರ್ನಾಟಕದ ಪ್ರಥಮ ಎಂಜಿನಿಯರ್ ದಂಪತಿಗಳು.

ಇಂದು ಶಾಂತಾ ಮತ್ತು ವಿಜಯರಾಘವನ್ ನಿವೃತ್ತರಾಗಿದ್ದಾರೆ. ಇಬ್ಬರು ಮಕ್ಕಳು, ಐದು ಜನ ಮೊಮ್ಮಕ್ಕಳ ತುಂಬು ಕುಟುಂಬ ಅವರ ಬದುಕಿನ ಕೇಂದ್ರವಾಗಿದೆ. ಜೀವನ ಸಂಜೆಯಲ್ಲಿ ಶಾಂತಾ ಮತ್ತು ವಿಜಯರಾಘವನ್, ಬೆಂಗಳೂರಿನ ತಮ್ಮ ಸುಂದರವಾದ ಮನೆಯಲ್ಲಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ಶಾಂತಾ ಅವರ ಜೀವನ ಅವರ ವಿದ್ಯಾಭ್ಯಾಸ ಮತ್ತು ವೃತ್ತಿಜೀವನದ ಉತ್ಕರ್ಷದ ಕಾಲಕ್ಕೆ ಸವಾಲಿನದಾಗಿತ್ತು. ಈಗ ನೋಡಿದರೂ ಅವರ ಸಾಧನೆ ಅಚ್ಚರಿ ಹುಟ್ಟಿಸುವಂತಿದೆ ಹಾಗೂ ಈ ಕಾಲದ ಜಾಣೆಯರಿಗೆ ಸ್ಫೂರ್ತಿದಾಯಕವಾಗಿದೆ.

**ಪ್ರತಿಕ್ರಿಯಿಸಿ: feedback@sudha.co.in**